
# ಸೆಲೆಬ್ರಿಟಿ

■ ಹನಿ

## ಟಾಮ್ ವಿಚ್ಛೇದನ


'ವಿಶ್ವದ ಅತ್ಯಂತ ಹೆಚ್ಚು ಸಂಭಾವನೆ ಪಡೆಯುವ ನಟ' ಟಾಮ್ ಕ್ರೂಸ್ ಮೂರನೇ ವಿಚ್ಛೇದನದ ಹೊಸ್ತಿಲಲ್ಲಿ ನಿಂತು ಒದ್ದಾಡುತ್ತಿದ್ದಾನೆ. ಫೋರ್ಬ್ಸ್ ಪ್ರಕಾರ ಈತ ವಿಶ್ವದ ಅತ್ಯಂತ ಪ್ರಭಾವಶಾಲಿ ಐವರು ವ್ಯಕ್ತಿಗಳಲ್ಲಿ ಒಬ್ಬ. ಆದರೆ ಈತನ ಈ ಪ್ರಭಾವ ಪತ್ನಿ ಕೇಟೀ ಹೋಮ್ಸ್ ಮೇಲೆ ನಡೆಯಲಿಲ್ಲ. ದೂರದ ಐಸ್‌ಲ್ಯಾಂಡ್‌ನಲ್ಲಿ ಟಾಮ್ ಕ್ರೂಸ್ ಶೂಟಿಂಗ್‌ನಲ್ಲಿ ತೊಡಗಿದ್ದಾಗ, ಇತ್ತ ಅಮೆರಿಕಾದಲ್ಲಿ ಆತನ ಪತ್ನಿ ಕೇಟೀ ಹೋಮ್ಸ್ ಪತಿಯಿಂದ ವಿಚ್ಛೇದನ ಕೋರಿ ತಣ್ಣಗೆ ಕೋರ್ಟಿಗೆ ಅರ್ಜಿ ಸಲ್ಲಿಸಿದ್ದಾಳೆ. ಈ ಸುದ್ದಿ ಓದುವ ಹೊತ್ತಿಗೆ ವಿಚ್ಛೇದನ ಪ್ರಕ್ರಿಯೆ ಪೂರ್ಣಗೊಂಡಿರುವ ಸಾಧ್ಯತೆ ಇದೆ. ಆದರೆ ಮದುವೆಯನ್ನು ಉಳಿಸಿಕೊಳ್ಳಲು, ವಿಚ್ಛೇದನದ ಪ್ರಕ್ರಿಯೆಯನ್ನು ವಿಳಂಬಗೊಳಿಸಲು ಟಾಮ್ ಕ್ರೂಸ್ ಇನ್ನಿಲ್ಲದ ಪ್ರಯತ್ನ ನಡೆಸಿದ್ದು ಮಾತ್ರ ನಿಜ. 'ಮಿಶನ್ ಇಂಪಾಸಿಬಲ್' ಎಂಬ ವಿಶ್ವವಿಖ್ಯಾತ ಸಿನಿಮಾದ ಈ ಸೂಪರ್ ಹೀರೊ, ತನ್ನ ಮತ್ತು ಪತ್ನಿಯ ವಿಚ್ಛೇದನದ ವಿವರಗಳನ್ನು ರಹಸ್ಯವಾಗಿರಿಸಲು ಯತ್ನಿಸುತ್ತಿರುವುದೂ ತಮಾಷೆಯಾಗಿದೆ. ಅದಕ್ಕೆ ತಕ್ಕಂತೆ ಮಾಧ್ಯಮಗಳು ಇಬ್ಬರ ಘಟಸ್ಫೋಟದ ಬಗ್ಗೆ ಒಂದೇ ಸಮನೆ ಕಥೆಗಳನ್ನು ಪ್ರಕಟಿಸುತ್ತಿವೆ. '6 ವರ್ಷದ ಮಗಳು ಸುರಿ ಮೇಲೆ ಈ ವರದಿಗಳು ದುಷ್ಪರಿಣಾಮ ಬೀರುತ್ತಿವೆ' ಎನ್ನುವುದು ಟಾಮ್ ಅಳಲು! ವಿಚ್ಛೇದನವಾದ ಬಳಿಕ ಮಗಳು ಸುರಿ ಅಮ್ಮನ ಜತೆಯಲ್ಲೇ ವಾಸಿಸುವುದು ಖಚಿತವಾಗಿದೆ. ಈ ಎಳೆಯ ಮಗಳನ್ನು ಇನ್ನಿಲ್ಲದಂತೆ ಪ್ರೀತಿಸುತ್ತಿರುವ ಟಾಮ್, ವಿಚ್ಛೇದನವಾದ ಬಳಿಕ ಇಷ್ಟ ಬಂದಾಗಲೆಲ್ಲ ಮಗಳನ್ನು ನೋಡುವ ಸ್ವಾತಂತ್ರ್ಯಕ್ಕೂ ಪರದಾಡುತ್ತಿದ್ದಾನೆ.



ಟಾಮ್ ಮತ್ತು ಕೇಟೀ ಸಿನಿಮಾವೊಂದರ ಶೂಟಿಂಗ್‌ನಲ್ಲಿ ಜತೆಯಾದದ್ದು 2005ರಲ್ಲಿ. ಅದೇ ವರ್ಷ ಟೀವಿ ಷೋ ಒಂದರಲ್ಲಿ ಇಬ್ಬರ ಪ್ರೇಮಪ್ರಕರಣ ಬಯಲಾಯಿತು. ಕೇಟೀ ಅದಾಗಲೇ ಗರ್ಭಿಣಿಯಾಗಿದ್ದಳು. 2006ರಲ್ಲಿ ಮಗು ಹೆತ್ತ ಬಳಿಕ ಇಬ್ಬರ ಮದುವೆಯೂ ನಡೆಯಿತು. ಇದಕ್ಕೂ ಮುಂಚೆ ಇಬ್ಬರು ಹೆಂಡಿರಿಂದ ವಿಚ್ಛೇದನ ಪಡೆದಿದ್ದ ಟಾಮ್ ಕ್ರೂಸ್, ಕೇಟೀಯನ್ನು ಎಲ್ಲರಿಗಿಂತ ಹೆಚ್ಚು ಪ್ರೀತಿಸುತ್ತಿದ್ದನಂತೆ. ಇಬ್ಬರ ನಡುವೆ ವಿಚ್ಛೇದನಕ್ಕೆ ಕಾರಣ ಏನೆನ್ನುವುದೇ ಈಗ ರಹಸ್ಯ ವಿಷಯ. ಕುಟುಂಬದ ಮೂಲಗಳ ಪ್ರಕಾರ, ಟಾಮ್ ಕ್ಯಾಥೊಲಿಕ್ ಧರ್ಮವನ್ನು ಬಿಟ್ಟು 'ಚರ್ಚ್ ಆಫ್ ಸೈಂಟಾಲಜಿ'ಯ ಸದಸ್ಯನಾದದ್ದೇ ವಿಚ್ಛೇದನಕ್ಕೆ ಕಾರಣವಂತೆ! ಈ ಚರ್ಚ್ ಆಫ್ ಸೈಂಟಾಲಜಿ ಎನ್ನುವುದೊಂದು ವಿವಾದಾಸ್ಪದ ಪಂಥ. ಮನುಷ್ಯನ ಆಧ್ಯಾತ್ಮಿಕ ಸೂಪರ್ ಪವರ್ ಬಗ್ಗೆ ಹೆಚ್ಚು ಒಲವುಳ್ಳ ಈ ಪಂಥದವರು, 'ಮನುಷ್ಯನ ಆತ್ಮವನ್ನು ಈ ಲೌಕಿಕ ಜಗತ್ತಿನಲ್ಲಿ ಗಗನಮುಖಿ ಶಕ್ತಿಗಳು ಒತ್ತೆಯಿಟ್ಟುಕೊಂಡಿವೆ. ಅದರಿಂದ ಆತ್ಮವನ್ನು ಬಿಡುಗಡೆ ಮಾಡುವುದೇ ನಮ್ಮ ಗುರಿ' ಎನ್ನುತ್ತಾರೆ. ಟಾಮ್ ಮೊದಲ ಹೆಂಡತಿಯರಿಂದ ಪಡೆದ ಕೊನ್ನೋರ್ ಎಂಬ ಮಗ ಹಾಗೂ ಇಸಾಬೆಲ್ಲಾ ಎಂಬ ಮಗಳು ಈಗಾಗಲೆ ಅಪ್ಪನ ಜತೆಗೆ ಸೈಂಟಾಲಜಿ ಪಂಥ ಸೇರಿಯಾಗಿದೆ. ಕೇಟೀಗೆ ಈ ಪಂಥದ ಬಗ್ಗೆ ತೀವ್ರ ಅನುಮಾನಗಳಿರುವ ಹಿನ್ನೆಲೆಯಲ್ಲಿ ಇವರ ಮದುವೆ ಮುರಿದುಬಿದ್ದಿದೆ ಎನ್ನುವುದು ಸದ್ಯಕ್ಕೆ ಎಲ್ಲರೂ ನಂಬಿರುವ ಸತ್ಯ. ಮೂರು ಸಲ ಆಸ್ಕರ್ ಪ್ರಶಸ್ತಿಗೆ ನಾಮಕರಣಗೊಂಡು, ಮೂರು ಸಲ ಗೋಲ್ಡನ್ ಗ್ಲೋಬ್ ಗೆದ್ದಿರುವ ಟಾಮ್ ನಾಲ್ಕನೇ ಮದುವೆಯಾಗುವ ದಿನ ದೂರವಿಲ್ಲ.

## ಸೆರೆನಾ ನಿವೃತ್ತಿಯೆ?

ಐದನೇ ಬಾರಿ ವಿಂಬಲ್ಡನ್ ಟೆನಿಸ್ ಪ್ರಶಸ್ತಿ ಗೆದ್ದಿರುವ ಸೆರೆನಾ ವಿಲಿಯಮ್ಸ್‌ಳ ದೈತ್ಯ ಶಕ್ತಿಯನ್ನು ನೋಡಿ ಅಭಿಮಾನಿಗಳು ನಿಬ್ಬೆರಗಾಗಿದ್ದಾರೆ. ಒಂದು ವರ್ಷ ಪೂರ್ತಿ ಅನಾರೋಗ್ಯದಿಂದ ಬಸವಳಿದಿದ್ದ ಸೆರೆನಾ ವಿಲಿಯಮ್ಸ್ ಚೇತರಿಸಿಕೊಂಡು, ಮತ್ತೆ ಕೋರ್ಟಿಗೆ ಮರಳಿ ಫೈನಲ್‌ವರೆಗೆ ಎದುರಿಗೆ ಸಿಕ್ಕಿದ ಸ್ಪರ್ಧಿಗಳನ್ನೆಲ್ಲ ಸದೆಬಡಿದ ರೀತಿ ಯಾರಲ್ಲೂ ಬೆರಗು ಹುಟ್ಟಿಸುವಂಥದ್ದೇ. ಎರಡು ಬಾರಿ ಕಾಲುಗಳ ಆಪರೇಶನ್‌ಗೆ ಒಳಗಾಗಿ, ಒಮ್ಮೆ ಶ್ವಾಸಕೋಶದಲ್ಲಿ ರಕ್ತಬಿಂದು ಹೆಪ್ಪುಗಟ್ಟಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಸೆರೆನಾ, ವಿಂಬಲ್ಡನ್ ಫೈನಲ್‌ನಲ್ಲೂ ನಿರಾಯಾಸವಾಗಿ ಆಡಿ ಟ್ರೋಫಿ ಗೆದ್ದಿದ್ದಾಳೆ. ಒಂದು ಕಾಲದಲ್ಲಿ ವಿಶ್ವದ ನಂಬರ್ ಒನ್ ಆಟಗಾರ್ತಿಯಾಗಿದ್ದ ಸೆರೆನಾ, ಈಗ ವಿಶ್ವದ 4ನೇ ಸೀಡ್‌ನಲ್ಲಿದ್ದಾಳೆ. ಮುಂದಿನ ಸೆಪ್ಟೆಂಬರ್ 26ಕ್ಕೆ ಈಕೆ 32ನೇ ವಯಸ್ಸಿಗೆ ಕಾಲಿಡುತ್ತಿದ್ದಾಳೆ.



ಟೆನಿಸ್ ಜಗತ್ತಿನಲ್ಲಿ 31ರ ಬಳಿಕ ಗ್ರ್ಯಾನ್‌ಸ್ಲ್ಯಾಮ್ ಗೆದ್ದವರು ಕಡಿಮೆಯೇ. ಈ ವಯಸ್ಸಿನ ಆಸುಪಾಸಿನಲ್ಲೇ ಹಲವಾರು ದಿಗ್ಗಜರು ಗ್ರ್ಯಾನ್‌ಸ್ಲಾಮ್‌ನಿಂದ ಹೊರಬಿದ್ದಿದ್ದಾರೆ. ಬಿಲ್ಲಿ ಜೀನ್ ಕಿಂಗ್, ಕ್ರಿಸ್ ಎವರ್ಟ್, ಸ್ಟೆಫಿ ಗ್ರಾಫ್, ಮೋನಿಕಾ ಸೆಲೆಸ್, ಬಾರ್ನ್ ಬಾರ್ಗ್, ಜಿಮ್ಮಿ ಕಾನರ್ಸ್, ಜಾನ್ ಮೆಕೆನ್ರೊ– ಹೀಗೆ 31ರ ಸುತ್ತಮುತ್ತ ಪ್ರತಿಷ್ಠಿತ ಸಿಂಗಲ್ಸ್‌ನಿಂದ ಹೊರಬಿದ್ದವರ ಪಟ್ಟಿ ದೊಡ್ಡದಿದೆ. ಹಾಗೆಂದೇ ಸೆರೆನಾ ಕೂಡಾ ನಿವೃತ್ತಿಯಾಗುವ ಕಾಲ ಬಂದಿದೆ ಎನ್ನುವ ಚರ್ಚೆ ಶುರುವಾಗಿದೆ. ಆದರೆ ವಿಂಬಲ್ಡನ್‌ನಲ್ಲಿ ಈಕೆಯ ಆಟ ನೋಡಿದವರು ಇನ್ನೂ 3–4 ವರ್ಷಗಳ ಕಾಲ ಈಕೆಯನ್ನು ಪ್ರಶಸ್ತಿಗಳಿಂದ ತಡೆಯಲು ಆಗಲಿಕ್ಕಿಲ್ಲ ಎಂದೇ ಅಂದಾಜು ಮಾಡುತ್ತಿದ್ದಾರೆ.

ಮಾರ್ಗರೆಟ್ ಕೋರ್ಟ್ ಅತ್ಯಧಿಕ 24 ಸಲ ಗ್ರ್ಯಾನ್‌ಸ್ಲಾಮ್ ಗೆದ್ದು ವಿಶ್ವ ದಾಖಲೆ ಹೊಂದಿದಾಕೆ. ಮಾರ್ಟಿನಾ ನವ್ರಾಟಿಲೋವ ಮತ್ತು ಕ್ರಿಸ್ ಎವರ್ಟ್ ಈವರೆಗೆ 18 ಸಲ ಗ್ರ್ಯಾನ್‌ಸ್ಲಾಮ್ ಗೆದ್ದಿದ್ದಾರೆ. ಈ ಸಲ ವಿಂಬಲ್ಡನ್ ಗೆಲ್ಲುವುದರೊಂದಿಗೆ ಸೆರೆನಾ 14ನೇ ಗ್ರ್ಯಾನ್ ಸ್ಲ್ಯಾಮ್ ದಾಖಲಿಸಿದ್ದಾಳೆ. 33ರ ಹರೆಯದ ಮಾರ್ಟಿನಾ ವಿಂಬಲ್ಡನ್ ಗೆದ್ದಿರುವಾಗ ಸೆರೆನಾ ಇನ್ನೂ ಐದು ವರ್ಷ ಪ್ರಶಸ್ತಿ ಗೆಲ್ಲುವುದು ಅಸಾಧ್ಯವೇನಲ್ಲ ಎನ್ನುವುದು ಅಭಿಮಾನಿಗಳ ವಾದ. 'ಈಗ ಪರಿಪೂರ್ಣ ಆರೋಗ್ಯವಿದೆ. ಆರೋಗ್ಯ ಇರುವಷ್ಟು ಕಾಲ ಆಡುತ್ತೇನೆ' ಎಂದಿದ್ದಾಳೆ ಸೆರೆನಾ. ವಿಂಬಲ್ಡನ್ ಬಳಿಕ ಪ್ಯಾರಿಸ್‌ನಲ್ಲಿ ಫ್ಯಾಶನ್ ಕಲೆಕ್ಷನ್‌ಗೆ ಮಾಡೆಲಿಂಗ್ ಮುಗಿಸಿ, ಒಲಿಂಪಿಕ್ಸ್‌ಗೆ ತಯಾರಾಗುತ್ತಿರುವ ಸೆರೆನಾಳ ಸಾಮರ್ಥ್ಯವನ್ನು ಕಡಿಮೆ ಅಂದಾಜು ಮಾಡುವುದು ಕಷ್ಟ!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65